# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ 15.11.2018ರಂದು 4.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ಡಿ.ಶಿವಲಿಂಗಯ್ಯ ರವರ ಅಧ್ಯಕ್ಷತೆಯಲ್ಲಿ ನಡೆದ 48ನೇ ಶೈಕ್ಷಣಿಕ ಮಂಡಳಿ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಪ್ರೊ. ಡಿ. ಶಿವಲಿಂಗಯ್ಯ**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ರಮೇಶ್. ಬಿ**<br>ಕುಲಸಚಿವರು<br>ಕರಾಮುವಿ,<br>ಮೈಸೂರು. |
| **ಪ್ರೊ. ಜಗದೀಶ**<br>ಡೀನ್ (ಶೈಕ್ಷಣಿಕ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಪ್ರೊ. ಡಿ.ಬಿ. ಬಸವರಾಜ್**<br>ಡೀನ್ (ಅಧ್ಯಯನ ಕೇಂದ್ರಗಳು) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಪ್ರೊ. ಎ. ರಂಗಸ್ವಾಮಿ**<br>ಕುಲಸಚಿವ (ಪರೀಕ್ಷಾಂಗ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಡಾ॥ ಲಕ್ಷ್ಮಿ.ಎನ್**<br>ಮುಖ್ಯಸ್ಥರು, ಶಿಕ್ಷಣ ಶಾಸ್ತ್ರ ವಿಭಾಗ ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು | |
| **ವಿಶೇಷ ಆಹ್ವಾನಿತರು** | |
| **ಡಾ. ಪ್ರಕಾಶ್,**<br>ನಿರ್ದೇಶಕರು – ಐ.ಟಿ. | **ಡಾ. ಶಲ್ವಪಿಳ್ಳೆ ಅಯ್ಯಂಗಾರ್,**<br>ನಿರ್ದೇಶಕರು (ಪ್ರವೇಶಾತಿ) |

ಕುಲಸಚಿವರು

ಕುಲಪತಿಗಳು 15/11

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ ಶೈಕ್ಷಣಿಕ ಮಂಡಳಿ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು.

**ವಿಷಯ ಸಂಖ್ಯೆ : 01**

**ವಿಷಯ: 2018–19ನೇ ಜನವರಿ ಆವರ್ತ ಶೈಕ್ಷಣಿಕ ಸಾಲಿನ ಬಿ.ಇಡಿ/ಎಂ.ಬಿ.ಎ ವಿವರಣಾ ಪುಸ್ತಕವನ್ನು ಅನುಮೋದಿಸುವ ಬಗ್ಗೆ.**

******

ಎನ್.ಸಿ.ಟಿ.ಇ. ನಿಯಮಾವಳಿ 2014 ಹಾಗೂ ಯು.ಜಿ.ಸಿ. ನಿಯಮಾನುಸಾರ ಸಿದ್ಧಪಡಿಸಲಾಗಿರುವ 2018–19ನೇ ಶೈಕ್ಷಣಿಕ ಸಾಲಿನ ಬಿ.ಇಡಿ. ವಿವರಣಾ ಪುಸ್ತಕವನ್ನು ಸಿದ್ದಪಡಿಸಲಾಗಿದ್ದು, ಹಾಗೆಯೇ ವಿವಿಯು ನಡೆಸುವ ಎಂ.ಬಿ.ಎ ಕೋರ್ಸಿನ ವಿವರಣಾ ಮುಸ್ತಕವನ್ನು ಸಹ ನಿಯಮದ ಪ್ರಕಾರ ವಿಭಾಗವು ಸಿದ್ದಪಡಿಸಿದ್ದು, ಅವುಗಳ ಅನುಮೋದನೆ ಕೋರಿ ಶೈಕ್ಷಣಿಕ ಮಂಡಳಿಯ ಸಭೆಗೆ ವಿಷಯವಾಗಿ ಮಂಡಿಸಿದೆ.

**ತೀರ್ಮಾನ : ಬಿ.ಇಡಿ ಮತ್ತು ಎಂ.ಬಿ.ಎ ಪ್ರವೇಶಾತಿ ವಿರಣಾ ಪುಸ್ತಕಗಳನ್ನು ಪರಿಶೀಲಿಸಿ ಅನುಮೋದನೆ ನೀಡಲಾಯಿತು.**

-----

**ವಿಷಯ ಸಂಖ್ಯೆ : 02**

**ವಿಷಯ:** Academic Counselor Manual ನ್ನು ಶೈಕ್ಷಣಿಕ/ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದಿಸುವ ಬಗ್ಗೆ.

*****

ಅರ್ಹತೆ ಇರುವ Academic Counselor ಗಳನ್ನು ನೇಮಕ ಮಾಡಲು ಮತ್ತು ಅವರು ನಿಭಾಯಿಸಬೇಕಾದ ಕರ್ತವ್ಯ ಮತ್ತು ಜವಬ್ದಾರಿಗಳನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ಈ ಕೈಪಿಡಿಯನ್ನು ಇಗ್ನೋ ಮತ್ತು ಇತರ ಮುಕ್ತ ವಿಶ್ವವಿದ್ಯಾನಿಲಯಗಳಿಂದ ಅಳವಡಿಸಿಕೊಂಡಿರುವ ಮಾದರಿಯಂತೆ ಸಿದ್ಧಪಡಿಸಲಾಗಿದೆ. ಈ ಕೈಪಿಡಿಯನ್ನು ಮಾನ್ಯ ಕುಲಪತಿಗಳು ನೇಮಿಸಿರುವ ಸಮಿತಿಯಿಂದ ರಚಿಸಲ್ಪಟ್ಟಿದೆ. ಈ ಸಮಿತಿಯಲ್ಲಿ ಡೀನ್ (ಶೈಕ್ಷಣಿಕ) ರವರು ಅಧ್ಯಕ್ಷರಾಗಿದ್ದು ಇತರೆ ಐದು ಶೈಕ್ಷಣಿಕ ವರ್ಗದ ಸದಸ್ಯರಿರುತ್ತಾರೆ. ಈ ಕೈಪಿಡಿಯು ವಿಶ್ವವಿದ್ಯಾನಿಲಯ ನಡೆಸುವ PCP/ಸಮಾಲೋಚನೆ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಸಹಾಯವಾಗುತ್ತದೆ. ಸದರಿ ವಿಷಯವನ್ನು ಮಾನ್ಯ ಕುಲಪತಿಗಳ ಅನುಮೋದನೆ ಪಡೆಯಲಾಗಿದೆ ಹಾಗೂ ಶೈಕ್ಷಣಿಕ ಮಂಡಳಿ ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಕೋರಿದೆ.

ತೀರ್ಮಾನ : Academic Counselor Manual ನ ಕರಡನ್ನು ಅನುಮೋದಿಸಲಾಯಿತು.

-----

ಕುಲಸಚಿವರು

ಕುಲಪತಿಗಳು 15/11

ವಿಷಯ ಸಂಖ್ಯೆ : 03

**ವಿಷಯ:** 2019–20ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲುದ್ದೇಶಿಸಿರುವ ಹೊಸ ಶೈಕ್ಷಣಿಕ ಕಾರ್ಯಕ್ರಮಗಳ ಅಧ್ಯಯನ ವಿಭಾಗಗಳಿಗೆ ಯುಜಿಸಿ (ಓ.ಡಿ.ಎಲ್) ಮಾರ್ಗಸೂಚಿ – 2017 ರನ್ವಯ ಅಗತ್ಯ ಬೋಧಕ ಹುದ್ದೆಗಳ ಸೃಜನೆ ಕುರಿತು:

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಯುಜಿಸಿಯ ಮಾನ್ಯತೆಯೊಂದಿಗೆ 2018–19ನೇ ಶೈಕ್ಷಣಿಕ ಸಾಲಿನಲ್ಲಿ ಜುಲೈ – 2018ರ ಅಧಿವೇಶನದಲ್ಲಿ ಮೊದಲನೇ ಹಂತದಲ್ಲಿ (17), ಎರಡನೇ ಹಂತದಲ್ಲಿ 12, ಒಟ್ಟಾರೆ 29 ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರವೇಶಾತಿಯನ್ನು ಮಾಡಲಾಗಿದ್ದು, ಜನವರಿ – 2019ರ ಅಧಿವೇಶನಕ್ಕೆ ಮತ್ತೆರಡು (ಬಿ.ಇಡಿ ಮತ್ತು ಎಂ.ಬಿ.ಎ) ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗೆ ಕ್ರಮಕೈಗೊಳ್ಳಲಾಗುತ್ತಿದೆ.

ವಿಶ್ವವಿದ್ಯಾನಿಲಯವು ವಿಜ್ಞಾನ ವಿಷಯಗಳಿಗೆ ಸಂಬಂಧಪಟ್ಟಂತೆ ಸ್ನಾತಕೋತ್ತರ ಮಟ್ಟದಲ್ಲಿ M.Sc – Physics, Chemistry, Mathematics, Bio Chemistry, Clinical Nutrition & Dietetics, Bio-Technology, Micro – Biology, Environmental Science, Psychology, Computer Science, Information Science, Geography ಶೈಕ್ಷಣಿಕ ಕಾರ್ಯಕ್ರಮಗಳಿದ್ದು ಇವುಗಳಲ್ಲಿ ಬೇಡಿಕೆ ಇರುವ ವಿಷಯಗಳಲ್ಲಿ ಸ್ನಾತಕ ಮಟ್ಟದಲ್ಲಿ (ಫೀಢರ್ ಹಂತದಲ್ಲಿ) ವಿಜ್ಞಾನ ವಿಷಯಗಳನ್ನೂ ಒಳಗೊಂಡಂತೆ ಪ್ರಸ್ತುತ ಸನ್ನಿವೇಶಕ್ಕೆ ಪೂರಕವಾಗಬಹುದಾದ ಹಾಗೂ ವೃತ್ತಿಪರತೆಯುಳ್ಳ ಹೊಸ ಕೋರ್ಸುಗಳನ್ನು ಪ್ರಾರಂಭಿಸುವ ಉದ್ದೇಶದಿಂದ ಕ್ರಮವಾಗಿ ದಿನಾಂಕ:24.08.2018ರಂದು ನಡೆದ 47ನೇ ಸಾಮಾನ್ಯ ಹಾಗೂ ದಿನಾಂಕ:30.10.2018ರಂದು ನಡೆದ ಶೈಕ್ಷಣಿಕ ಮಂಡಳಿಯ ವಿಶೇಷ ಸಭೆಯಲ್ಲಿ ಕೆಳಕಂಡ ಶೈಕ್ಷಣಿಕ ಕಾರ್ಯಕ್ರಮಗಳನ್ನು 2019–2020ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಆದ ತೀರ್ಮಾನವನ್ನು ಕ್ರಮವಾಗಿ ದಿನಾಂಕ:07.09.2018ರಂದು ನಡೆದ 151ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಹಾಗೂ ದಿನಾಂಕ:02.11.2018ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 52ನೇ ವಿಶೇಷ ಸಭೆಯು ಸದರಿ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಅಗತ್ಯವಾದ ಎಲ್ಲಾ ಕ್ರಮ ಕೈಗೊಳ್ಳಲು ಅನುಮೋದನೆ ನೀಡಿರುತ್ತದೆ (ವಿ.ಸಂ:151.30 ಮತ್ತು 52.01).

ಕೋರ್ಸುಗಳ ವಿವರ ಕೆಳಕಂಡಂತಿದೆ:

- **B.Sc.** with **P.C.M** (Physics, Chemistry Mathematics),
  **C.B.Z** (Chemistry, Botany, Zoology),
  **S.M.C** (Statistics, Mathematics and Computer Science)
- **B.S.W** (Bachelor of Social Work)
- **M.S.W** (Master of Social Work)
- **M.Sc.** – Botany
- **M.Sc.** – Zoology
- **M.A** – Education
- **B.B.A.** (Bachelor of Business Administration)

ಕುಲಸಚಿವರು ಕುಲಪತಿಗಳು

ಈ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಯುಜಿಸಿಯ ಮಾನ್ಯತೆ ಪಡೆಯಲು ಅಗತ್ಯ ಬೋಧಕ ಹುದ್ದೆಗಳನ್ನು ಹೊಂದಬೇಕಾದುದು ಅತ್ಯಗತ್ಯವಾಗಿದ್ದು, UGC (ODL) Regulations – 2017 ರನ್ವಯ ಒಂದು ಶೈಕ್ಷಣಿಕ ಕಾರ್ಯಕ್ರಮಕ್ಕೆ 01 ಸಹ ಪ್ರಾಧ್ಯಾಪಕ ಮತ್ತು 02 ಸಹಾಯಕ ಪ್ರಾಧ್ಯಾಪಕರನ್ನು ಹೊಂದಬೇಕಾಗಿರುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡು ಕೆಳಕಂಡಂತೆ ಹೆಚ್ಚುವರಿ ಬೋಧಕ ಹುದ್ದೆಗಳ ಸೃಜನೆಗೆ ಅಗತ್ಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ.

| Name of the Department | | Sl No | Name of the Course | Proposed teaching posts for creation | | | | |
|---|---|---|---|---|---|---|---|---|
| | | | | Professor | Associate Professor | Assistant Professor | Total | Grand Total |
| 1 | Social Work Department | 1 | Bachelor of Social Work (BSW) | - | 1 | 2 | 3 | 7 |
| | | 2 | Master of Social Work (MSW) | 1 | 1 | 2 | 4 | |
| 2 | Science Department | 1 | M.Sc. – Botany | - | 1 | 2 | 3 | 3 |
| | | 2 | M.Sc. – Zoology | - | 1 | 2 | 3 | 3 |
| | | 3 | B,Sc. – 1. Physics | - | 1 | 1 | 1 | 8 |
| | | | 2. Chemistry | - | | 1 | 1 | |
| | | | 3. Mathematics | - | | 1 | 1 | |
| | | | 4. Botany | - | | 1 | 1 | |
| | | | 5. Zoology | - | | 1 | 1 | |
| | | | 6. Statistics | - | | 1 | 1 | |
| | | | 7. Computer Science | - | | 1 | 1 | |
| | | 4 | B.C.A. – Bachelor of Computer Application | - | 1 | 2 | 3 | 3 |
| 3 | Education Department | - | 1. M.A in Education | - | 1 | - | 1 | 2 |
| | | | 2. B.Ed. (Asper NCTE Norms) | - | 1 | - | 1 | |
| 4 | Management Department | - | BBA – Bachelor of Business Administration | - | 1 | 2 | 3 | 3 |
| | | | 2. M.B.A. (Asper AICTE Norms) | 1 | 1 | 2 | 4 | 4 |
| | | | Total: | 2 | 10 | 21 | - | 33 |

ಕರಾಮುವಿ ಕಾಯ್ದೆಯ ಪ್ರಕಾರ ಬೋಧಕ ಹುದ್ದೆಗಳ ಸೃಜನೆ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಗಿದ್ದ ಅಧಿಕಾರವನ್ನು ಸರ್ಕಾರವು ದಿನಾಂಕ:01.06.1996 ರಿಂದ ಜಾರಿಗೆ ಬಂದಂತೆ

ಕುಲಸಚಿವರು

ಕುಲಪತಿಗಳು

15/11

ಹಿಂಪಡೆದಿದ್ದು, ಅದರಂತೆ ಬೋಧಕ ಹುದ್ದೆಗಳ ಸೃಜನೆಗೆ ಸರ್ಕಾರಕ್ಕೆ ಸೂಕ್ತ ವಿವರಣೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆಯಬೇಕಾಗಿರುತ್ತದೆ.

ಈ ಹುದ್ದೆಗಳ ಸೃಜನೆಯಿಂದ ವಾರ್ಷಿಕವಾಗಿ ಒಟ್ಟಾರೆ ರೂ:3,26,77,584/– (ಮೂರು ಕೋಟಿ. ಇಪ್ಪತ್ತಾರು ಲಕ್ಷದ ಎಪ್ಪತ್ತೇಳು ಸಾವಿರದ ಐದು ನೂರ ಎಂಬತ್ತ ನಾಲ್ಕು ರೂಪಾಯಿಗಳು ಮಾತ್ರ)ಗಳ ಆರ್ಥಿಕ ಹೊರೆಯಾಗಲಿದ್ದು ಸದರಿ ಹುದ್ದೆಗಳ ಸೃಜನೆಯ ಕುರಿತು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ ಅನುಮತಿ ಪಡೆಯುವ ಸಂಬಂಧದಲ್ಲಿನ ವಿಷಯವನ್ನು ಮಾನ್ಯ ಶೈಕ್ಷಣಿಕ ಮಂಡಳಿಯ ಸಭೆಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ಮೇಲ್ಕಂಡ ವಿಷಯವನ್ನು ಸಭೆಯಲ್ಲಿ ಚರ್ಚಿಸುವ ಸಂದರ್ಭದಲ್ಲಿ, ಶಿಕ್ಷಣಶಾಸ್ತ್ರ ವಿಭಾಗದ ಮುಖ್ಯಸ್ಥರು ವಿಭಾಗದಿಂದ B.Ed (Special Education) 2007–08 ರಿಂದ ಪ್ರಾರಂಭವಾಗಿತ್ತು, ಮಾನ್ಯತೆ ರದ್ದಾಗಿದ್ದರಿಂದ ಈ ಕೋರ್ಸ್‌ಅನ್ನು ಸ್ಥಗಿತಗೊಳಿಸಲಾಗಿತ್ತು ಎಂದು ತಿಳಿಸಿದರು. ಪ್ರಸ್ತುತ ಈ ಕೋರ್ಸ್‌ಗೆ ಬಹುಬೇಡಿಕೆ ಇದ್ದು, ಅದನ್ನು ಪುನರ್ ಪ್ರಾರಂಭಿಸುವುದು ಸೂಕ್ತ ಎಂದು ಮನವಿ ಮಾಡಿದರು.**

**B.Ed (Special Education) ಕೋರ್ಸ್‌ಗೆ ಯು.ಜಿ.ಸಿ. ನಿಯಮಾವಳಿ ಪ್ರಕಾರ 1 ಸಹ ಪ್ರಾಧ್ಯಾಪಕ, 3 ಸಹಾಯಕ ಪ್ರಾಧ್ಯಾಪಕರ ಹುದ್ದೆಯನ್ನು ಸೃಜನೆಮಾಡುವ ಅಗತ್ಯತೆ ಇದೆ ಎಂದು ಕುಲಸಚಿವರು ಹಾಗೂ ಸದಸ್ಯಕಾರ್ಯದರ್ಶಿ, ಶೈಕ್ಷಣಿಕ ಮಂಡಳಿ ರವರು ಸಭೆಯ ಗಮನಕ್ಕೆ ತಂದರು.**

**ಮುಂದುವರೆದು, ಡಾ. ಪ್ರಕಾಶ್, ನಿರ್ದೇಶಕರು – ಐ.ಟಿ, ಇವರು ಎಂ.ಲಿಬ್ ಸೈನ್ಸ್ ಮತ್ತು ಬಿ.ಲಿಬ್ ಸೈನ್ಸ್ ಗಳನ್ನು ಯು.ಜಿ.ಸಿ. ನಿಯಮಗಳ ಪ್ರಕಾರ ನಿರ್ವಹಣೆಮಾಡಲು ಅಗತ್ಯ ಹೆಚ್ಚುವರಿ ಅಧ್ಯಾಪಕರ ಹುದ್ದೆಗಳನ್ನು ಸೃಜನೆಮಾಡುವ ಬಗ್ಗೆ ಸಭೆಯ ಗಮನಕ್ಕೆತಂದರು. ಕುಲಸಚಿವರು ಇದಕ್ಕೆ ಪ್ರತಿಕ್ರಿಯೆ ನೀಡುತ್ತಾ ಈಗಾಗಲೇ ಸೃಜನೆಯಾಗಿರುವ ಹುದ್ದೆಗಳ ಜೊತೆಗೆ ಎಂ.ಲಿಬ್ ಸೈನ್ಸ್ ಕೋರ್ಸ್‌ಗೆ 1 ಪ್ರಾಧ್ಯಾಪಕರ ಹುದ್ದೆ ಹಾಗೂ 2 ಸಹಾಯಕ ಪ್ರಾಧ್ಯಾಪಕರ ಹುದ್ದೆ ಸೃಜಿಸುವ ಅಗತ್ಯವಿದೆ ಎಂದು ತಿಳಿಸಿದರು. ಮುಂದುವರೆದು, ಬಿ.ಲಿಬ್ ಸೈನ್ಸ್ ಕೋರ್ಸ್‌ಗೆ ಈಗಾಗಲೇ 1 ಸಹಪ್ರಾಧ್ಯಾಪಕ ಹಾಗೂ 1 ಸಹಾಯಕ ಪ್ರಾಧ್ಯಾಪಕ ಹುದ್ದೆಯನ್ನು ಸೃಜಿಸಿದ್ದು, ಹೆಚ್ಚುವರಿಯಾಗಿ 1 ಸಹಾಯಕ ಪ್ರಾಧ್ಯಾಪಕರ ಹುದ್ದೆಯನ್ನು ಸೃಜಿಸಬೇಕಿರುತ್ತದೆ ಎಂದು ಸಹ ತಿಳಿಸಿದರು.**

ನಿರ್ದೇಶಕರು (ಪ್ರವೇಶಾತಿ) ಡಾ. ಶಲ್ವಪಿಳ್ಳೆ ಅಯ್ಯಂಗಾರ್ ರವರು ಮಾತನಾಡುತ್ತಾ ಹಿಂದೆ ವಿವಿ ಯು **Master of Tourism and Management (M.T.M)** ಕೋರ್ಸ್ 2013–14 ರಿಂದ ನಡೆಸುತ್ತಿದ್ದು, ಮಾನ್ಯತೆಯ ರದ್ದತೆಯ ಕಾರಣದಿಂದ ಅದು ಸ್ಥಗಿತಗೊಂಡಿರುತ್ತದೆ. ಈ ಕೋರ್ಸ್‌ಗೂ ಸಹ ಬಹು ಬೇಡಿಕೆಯಿದ್ದು ಪುನರ್ ಪ್ರಾರಂಭಮಾಡುವುದು ಸೂಕ್ತ ಎಂದು ಮನವಿ ಮಾಡಿದರು.

ಕುಲಸಚಿವರು

ಕುಲಪತಿಗಳು 15/11

ಕುಲಸಚಿವರು ಹಾಗೂ ಸದಸ್ಯಕಾರ್ಯದರ್ಶಿ, ಶೈಕ್ಷಣಿಕ ಮಂಡಳಿ, ರವರು ಮಾತನಾಡುತ್ತಾ, ಈ ಕೋರ್ಸ್ ಅನ್ನು ಪ್ರಾರಂಭಿಸಲು ಯು.ಜಿ.ಸಿ. ನಿಯಮದ ಪ್ರಕಾರ 1 ಸಹ ಪ್ರಾಧ್ಯಾಪಕ ಮತ್ತು 2 ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ಸೃಜನೆ ಮಾಡಬೇಕಾಗುತ್ತದೆ ಎಂದು ತಿಳಿಸಿದರು. ಅದರಂತೆ ಈ ಕೆಳಕಂಡ ಹಾಗೆ ಹೊಸದಾಗಿ ಹೆಚ್ಚುವರಿ ಬೋಧಕ ಹುದ್ದೆಗಳ ಸೃಜನೆಯೂ ಆಗಬೇಕಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

| Name of the Department | | Sl No | Name of the Course | Proposed teaching posts for creation | | | |
|---|---|---|---|---|---|---|---|
| | | | | Professor | Associate Professor | Assistant Professor | Total |
| 5 | Education Department | 1 | B.Ed (Special Education) | - | 1 | 3 | 4 |
| 6 | Department of Tourism | 2 | Master of Tourism and Management (M.T.M) | - | 1 | 2 | 3 |
| 7 | Department of Library Science | 3 | M.Lib Sc. | 1 | - | 2 | 3 |
| | | | B.Lib Sc. | - | - | 1 | 1 |
| | | | **Grand Total** | 1 | 2 | 8 | 11 |

ತೀರ್ಮಾನ : ಮೇಲಿನ ವಿಷಯದಲ್ಲಿ ಪ್ರಸ್ತಾಪಿಸಿರುವ ಹಾಗೂ ಹೊಸದಾಗಿ ಪ್ರಾರಂಭಮಾಡಲು ಉದ್ದೇಶಿಸಿರುವ B.Ed (Special Education), **Master of Tourism and Management (M.T.M)** ಮತ್ತು **B.Lib Sc.** ಮತ್ತು **M.Lib Sc.** ಕೋರ್ಸ್‌ಗೆ ಅಗತ್ಯವಿರುವ ಹುದ್ದೆಗಳ ಸೃಜಿಸಲು ಸಹ ಶಿಫಾರಸ್ಸು ಮಾಡಲಾಯಿತು. ಈ ಸಂಬಂಧ ಕ್ರಮ ಸಂಖ್ಯೆ : 1 ರಿಂದ 4ರ ಹುದ್ದೆಗಳಿಗೆ ವಾರ್ಷಿಕವಾಗಿ ಒಟ್ಟಾರೆ ರೂ.3,26,77,584/- ಗಳು ಹಾಗೂ ಕ್ರಮ ಸಂಖ್ಯೆ : 5 ರಿಂದ 7 ರವರೆಗಿನ ಹುದ್ದೆಗಳಿಗೆ ವಾರ್ಷಿಕ ರೂ.1,08,70,528/- ಗಳನ್ನೊಳಗೊಂಡಂತೆ ಒಟ್ಟಾರೆ 44 ಹುದ್ದೆಗಳಿಗೆ ರೂ. 4,35,48,112/- (ರೂ. ನಾಲ್ಕು ಕೋಟಿ ಮೂವತ್ತೈದು ಲಕ್ಷದ ನಲವತ್ತೆಂಟು ಸಾವಿರದ ಒಂದು ನೂರ ಹನ್ನೆರಡು ಮಾತ್ರ) ಗಳು ವಾರ್ಷಿಕ ಆರ್ಥಿಕ ಹೊರೆಯಲಾಗಲಿದೆ ಎಂಬ ಅಂಶಗಳೊಂದಿಗೆ ಮೇಲಿನಂತೆ ಹುದ್ದೆಗಳನ್ನು ಸೃಜಿಸಲು ಶಿಫಾರಸ್ಸು ಮಾಡಲಾಯಿತು.

-----

ಅಂತಿಮವಾಗಿ 48ನೇ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಕುಲಸಚಿವರು

ಕುಲಪತಿಗಳು ಹಾಗೂ ಅಧ್ಯಕ್ಷರು

ಕುಲಪತಿಗಳು

15/11